# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43-ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ:ದಕಜಿಪ:ಗ್ರಾಪಂ:ಸಿಆರ್:41/2017-18(ಸಿ2) ದಿನಾಂಕ:14-07-2017 ಮತ್ತು 29-07-2017.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:11-08-2017 ರ ಕಾರಣ ಕೇಳುವ ನೋಟೀಸು.
3. ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ದಿನಾಂಕ:05-09-2017 ಮತ್ತು 11-12-2017ರ ಲಿಖಿತ ಹೇಳಿಕೆ.
4. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ:30-11-2017.
5. ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣ ಸಂಖ್ಯೆ:16856/2000 ಗೆ ಸಂಬಂಧಿಸಿದಂತೆ ಈರಗಂಟಪ್ಪ ಅಲಿಯಾಸ್ ವೀರಗಂಟಪ್ಪ ವಿರುದ್ಧ ಹನುಮಂತ ಮತ್ತು ಇತರರು 2003(6) Kar.LJ.342(DB)ILR 2003 Kar.3035(DB)

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ರವರ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಹೊಯಿಗೆ(ಮರಳು) ಪರವಾನಿಗೆ ಕೊಟ್ಟಿದ್ದು, ಅದರಿಂದ ಸರ್ಕಾರಕ್ಕೆ ಪಾವತಿಸುವ ಶುಲ್ಕ ಸಂದಾಯವಾಗಿರುವುದಿಲ್ಲ ಎಂದು ಶ್ರೀ ದರ್ಣಪ್ಪ ಮುಗೇರ ಎಂಬುವವರು ಶ್ರೀ ಧನಂಜಯ ಶೆಟ್ಟಿಯವರ ವಿರುದ್ಧ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರಿಗೆ ದೂರು ಸಲ್ಲಿಸಿದ್ದು, ಈ ದೂರಿಗೆ ಸಂಬಂಧಿಸಿದಂತೆ ಸದರಿಯವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ಸರ್ಕಾರಕ್ಕೆ ಸೂಚಿಸಿರುತ್ತಾರೆ.

ಅದರಂತೆ ಜಿಲ್ಲಾ ಪಂಚಾಯತಿಯಿಂದ ವಿವರಣೆ ಪಡೆಯಲಾಗಿದ್ದು, ಗ್ರಾಮ ಪಂಚಾಯತಿಯಿಂದ ಮರಳುಗಾರಿಕೆ ಬಗ್ಗೆ ಅನುಮತಿ ನೀಡಲು ಅವಕಾಶವಿಲ್ಲದಿದ್ದರೂ, ಶ್ರೀ ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಟ್ವಾಳ ತಾಲ್ಲೂಕು ರವರು ನೇತ್ರಾವತಿ ನದಿಯಿಂದ ಮರಳು ತೆಗೆಯುವ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆದು 2013ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಬಾಬ್ತು ತಿಂಗಳಿಗೆ ಸಾವಿರದಂತೆ ಒಟ್ಟು ಎರಡು ಸಾವಿರ ರೂಗಳನ್ನು ಅಭಿವೃದ್ಧಿ ಶುಲ್ಕವಾಗಿ ಗ್ರಾಮ ಪಂಚಾಯಿತಿಗೆ ಪಾವತಿಸಿರುವುದರಿಂದ ಮೇಲ್ನೋಟಕ್ಕೆ ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43ಎ ರಡಿ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕುವ ಬಗ್ಗೆ ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ,

-

ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ದಿನಾಂಕ:05-09-2017 ಮತ್ತು 11-12-2017ರ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

- ಶ್ರೀ ಪೂವಪ್ಪ ಪೂಜಾರಿ, ಶ್ರೀ ದಿನೇಶ್ ಮತ್ತು ತಾವು ಮರಳು ತೆಗೆಯಲು ನಿರಾಕ್ಷೇಪನಾ ಪತ್ರ ನೀಡಲು ಸರಪಾಡಿ ಗ್ರಾಮ ಪಂಚಾಯತ್‌ಗೆ ದಿನಾಂಕ:03.09.2013 ರಂದು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ದಿನಾಂಕ:01.10.2013 ರಂದು ಸರಪಾಡಿ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿಟ್ಟು ಸದರಿ ಸಭೆಯಲ್ಲಿ ನಿರ್ಣಯ ಸಂಖ್ಯೆ: 133/2013-14 ರಂತೆ ನಿರ್ಣಯ ಕೈಗೊಂಡಿರುತ್ತಾರೆ. ನಿರಾಕ್ಷೇಪಣಾ ಅರ್ಜಿಯ ಬಗ್ಗೆ ಸ್ಥಳ ತನಿಖೆ ನಡೆಸಿ ಸೂಕ್ತ ದಾಖಲೆಗಳನ್ನು ಪಡೆದು ಕಡ್ಡಾಯ ಷರತ್ತುಗಳೊಂದಿಗೆ ನಿರಾಕ್ಷೇಪಣಾ ಪತ್ರ ನೀಡುವುದೆಂದು ತೀರ್ಮಾನಿಸಲಾಯಿತು. ಗ್ರಾಮ ಪಂಚಾಯತ್ ಅಧ್ಯಕ್ಷರು ಈ ಚರ್ಚೆಯಲ್ಲಿ ಭಾಗವಹಿಸಿರುವುದಿಲ್ಲ. ಗ್ರಾಮ ಪಂಚಾಯತಿಗೆ ಮರಳು ತೆಗೆಯಲು ಅಥವಾ ಸಾಗಿಸಲು ಪರವಾನಿಗೆ ನೀಡುವ ಅಧಿಕಾರ ಇರುವುದಿಲ್ಲ. ಆದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 107ರ ಪ್ರಕಾರ ಗ್ರಾಮ ಪಂಚಾಯತಿಯಿಂದ ಒಪ್ಪಿಗೆಯನ್ನು ಪಡೆಯದ ಹೊರತು; ಅಂಥ ಕ್ರಮ ಕೈಗೊಳ್ಳತಕ್ಕದ್ದಲ್ಲ ಎಂದು ಇರುತ್ತದೆ.
- ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಗಳೂರು ರವರಿಂದ ಕ್ವಾರಿಯಿಂಗ್ ಪರ್ಮಿಟ್ ನಂ:255/2009-10 ದಿನಾಂಕ:27.01.2010ನ್ನು ಸರಪಾಡಿ ಗ್ರಾಮದ ಸರ್ವೆ ನಂ:104ರ ಭಾಗದ ಒಮದು ಎಕರೆಯಲ್ಲಿ ನೇತ್ರಾವತಿ ನದಿಯಿಂದ ಮರಳು ತೆಗೆದು ಸಾಗಣೆ ಮಾಡಲು ಅನುಮತಿ ಪಡೆದು ರಾಜಧನವನ್ನು ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪಾವತಿ ಮಾಡಿರುತ್ತೇನೆ.
- ನೇತ್ರಾವತಿ ನದಿ ಕಿನಾರೆಯಲ್ಲಿ ಹೊಯಿಗೆ (ಮರಳು) ತೆಗೆಯಲು ಗ್ರಾಮ ಪಂಚಾಯತಿಗೆ ಪರವಾನಗಿ ನೀಡುವ ಅಧಿಕಾರ ಇರುವುದಿಲ್ಲ. ಆದರೆ ಗ್ರಾಮ ಪಂಚಾಯತಿಗೆ ಮರಳು ತೆಗೆಯಲು ನಿರಾಕ್ಷೇಪಣಾ ಪತ್ರ ನೀಡಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 107ರ ಪ್ರಕಾರ ಅಧಿಕಾರ ಇರುತ್ತದೆ.
- ಮೇಲ್ಕಂಡ ಕಲಂ 107ರ ಪ್ರಕಾರ ತಾವು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಗಳೂರು ಇವರಿಂದ ಕ್ವಾರಿಯಿಂಗ್ ಪರ್ಮಿಟ್ ನಂ. 255/2009-10 ದಿನಾಂಕ: 27-01-2010 ನ್ನು ಸರಪಾಡಿ ಗ್ರಾಮದ ಸರ್ವೆ ಸಂ. 104ರ ಭಾಗದ 1 ಎಕರೆಯಲ್ಲಿ ನೇತ್ರಾವತಿ ನದಿಯಿಂದ ಮರಳು ತೆಗೆದು ಸಾಗಣೆ ಮಾಡಲು ಕರ್ನಾಟಕ ಮೈನರ್ ಮಿನರಲ್ಸ್ ಕನ್ವೇಷನ್ ರೂಲ್ಸ್, 1994ರ ನಿಯಮ 21-ಎ ರ ಪ್ರಕಾರ ಪರ್ಮಿಟನ್ನು ಪಡೆದು ರಾಜಧನವನ್ನು ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪಾವತಿಸಿರುತ್ತೇನೆ.
- ಮೇಲ್ಕಂಡ ಪರ್ಮಿಟ್‌ನ ಕಂಡಿಕೆ 5 ರಲ್ಲಿ ವಿವರಿಸಿರುವಂತೆ ತಾವು ದಿನಾಂಕ: 03-09-2013 ರಂದು ಸರಪಾಡಿ ಗ್ರಾಮ ಪಂಚಾಯತ್‌ಗೆ ಸಲ್ಲಿಸಿದ್ದ ಅರ್ಜಿಯನ್ವಯ ದಿನಾಂಕ: 01-10-2013 ರಂದು ಸರಪಾಡಿ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಸಂಖ್ಯೆ: 133/2013-14 ರಂತೆ ನಿರ್ಣಯ ಕೈಗೊಂಡು ಠರಾವನ್ನು ಹೊರಡಿಸಿದನ್ವಯ ದಿನಾಂಕ: 09-12-2013 ರಂದು ಮರಳು ಸಾಗಾಟದ ಅಭಿವೃದ್ಧಿ ಕೆಲಸಗಳ ಬಾಬತ್ತು ನವೆಂಬರ್ 2013 ಮತ್ತು ಡಿಸೆಂಬರ್ 2013ರ ಮಾಹೆಗಳಿಗೆ ಸಂಬಂಧಿಸಿದಂತೆ ರೂ. 2000.00 ಗಳನ್ನು ರಸೀದಿ ಸಂಖ್ಯೆ: 48683 ರ ಮೂಲಕ ಕಟ್ಟಿಸಿಕೊಂಡು ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತಾರೆ.
- "ಪೂವಪ್ಪ ಪೂಜಾರಿ, ಬಿನ್ ಸಂಗಪ್ಪ ಪೂಜಾರಿ ಕಡಮಜಲ್, ಧನಂಜಯ ಶೆಟ್ಟಿ ಬಿನ್ ಸುಬ್ಬಣ್ಣ ಶೆಟ್ಟಿ, ದಿನೇಶ್ ಬಿನ್ ಆನಂದ ಶೆಟ್ಟಿ ಬಜ, ಮಣಿ ನಾಲ್ಕೂರು ಇವರು ನೇತ್ರಾವತಿ ನದಿಯಿಂದ ಮರಳು ತೆಗೆಯಲು ನಿರಾಕ್ಷೇಪಣಾ ಪತ್ರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸ್ಥಳ ತನಿಖೆ ನಡೆಸಿ ಸೂಕ್ತ ದಾಖಲೆಗಳನ್ನು ಪಡೆದು ಕಡ್ಡಾಯ ಷರತ್ತುಗಳೊಂದಿಗೆ ನಿರಾಕ್ಷೇಪಣಾ ಪತ್ರ ನೀಡುವುದೆಂದು ತೀರ್ಮಾನಿಸಲಾಯಿತು" ಎಂದು ನಿರ್ಣಯ ಕೈಗೊಂಡಿರುತ್ತಾರೆ.

ಮೇಲ್ಕಂಡ ನಿರ್ಣಯದನ್ವಯ, ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದು ಕ್ವಾರಿಯಿಂಗ್ ಪರ್ಮಿಟ್ ಕ್ರಮಸಂಖ್ಯೆ: 20ರ ವಿಶೇಷ ಷರತ್ತಿನಲ್ಲಿ ವಿವರಿಸಿರುವಂತೆ ರಾಜ್ಯದ ಗ್ರಾಮಾಂತರ ಗಡಿ ಭಾಗದಲ್ಲಿ ಕಾಮಗಾರಿಗೆ ಸಂಬಂಧಿಸಿದ ಗ್ರಾಮ ಪಂಚಾಯತ್ ಕಾರ್ಯದರ್ಶಿ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಂದ ಅನುಮೋದನಾ ಪತ್ರವನ್ನು ಪಡೆದು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಇವರ ಕಛೇರಿಗೆ ಸಲ್ಲಿಸತಕ್ಕದ್ದೆಂದು ಸೂಚಿಸಿದ್ದನ್ವಯ ದಿನಾಂಕ: 09-12-2013 ರಂದು ನನ್ನಿಂದ ರೂ.2,000.00 ಗಳನ್ನು ನವೆಂಬರ್ 2013 ಮತ್ತು ಡಿಸೆಂಬರ್ 2013ರ ಮಾಹೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ರಸೀದಿ ದಿನಾಂಕ: 09-12-2013 ರ ಮೂಲಕ ಕಟ್ಟಿಸಿಕೊಂಡು, ದಿನಾಂಕ: 20-12-2013ರ ಸರಪಾಡಿ ಗ್ರಾಮ ಪಂಚಾಯತ್ ನ ನಿರಾಕ್ಷೇಪಣಾ ಪತ್ರ ಯನ್ನು ನೀಡಿರುತ್ತಾರೆ. ಮುಂದುವರಿದ ಪರ್ಮಿಟ್ ಸಂಖ್ಯೆ: 119/2013-14 ದಿನಾಂಕ: 08-10-2013/3124 ನ್ನು ಸರಪಾಡಿ ಗ್ರಾಮದ ಸರ್ವೇ ನಂ. 104/1ಎ1 ರ ಒಂದು ಎಕರೆ ವಿಸ್ತೀರ್ಣದಲ್ಲಿ ನೇತ್ರಾವತಿ ನದಿ ಕಿನಾರೆಯಿಂದ ಮರಳು ತೆಗೆಯಲು ಕ್ವಾರಿಯಿಂಗ್ ಪರ್ಮಿಟನ್ನು ದಿನಾಂಕ: 08-10-2013 ರಿಂದ 05-01-2014ರ ಅವಧಿಗೆ ಅಂದರೆ 90 ದಿನಗಳ ಅವಧಿಗೆ ಮಾತ್ರ ರೂ. 30,000.00 ಗಳನ್ನು ಮುಂಗಡ ರಾಜಧನವಾಗಿ ತಮ್ಮಿಂದ ಕಟ್ಟಿಸಿಕೊಂಡು ಕ್ವಾರಿಯಿಂಗ್ ಪರ್ಮಿಟನ್ನು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ನೀಡಿರುತ್ತಾರೆ.

ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್, ಮಂಗಳೂರು ಇವರಾಗಲೀ ಅಥವಾ ಪೋಲೀಸ್ ಅಧೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರಾಗಲೀ ಸರಪಾಡಿ ಗ್ರಾಮ ಪಂಚಾಯತ್ ಕಛೇರಿಗೆ ಭೇಟಿಕೊಟ್ಟು ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ವಿವರಗಳನ್ನು ಹಾಗೂ ಕ್ರಮಗಳನ್ನು ಪರಿಶೀಲಿಸಿರುವುದಿಲ್ಲ.

ಆ ರೀತಿಯಾಗಿ ಪರಿಶೀಲಿಸದೇ ಪೋಲೀಸ್ ಅಧೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರ ದಿನಾಂಕ: 25-07-2016ರ ಸುಳ್ಳು ವರದಿಯನ್ನು ಆಧರಿಸಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್, ಮಂಗಳೂರು ಇವರು ಅವರ ಪತ್ರ ದಿನಾಂಕ: 14-07-2017 ಮತ್ತು 29-07-2017ರ ಪತ್ರಗಳಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43-ಎ ರನ್ವಯ ತಮ್ಮಿಂದ ಗ್ರಾಮ ಸದಸ್ಯ ಸದಸ್ಯತ್ವದಿಂದ ತೆಗೆದು ಹಾಕಲು ಪ್ರಸ್ತಾವನೆಯನ್ನು ತಮಗೆ ಸಲ್ಲಿಸಿರುವುದು ಸೂಕ್ತ ಹಾಗೂ ನ್ಯಾಯಸಮ್ಮತವಾಗಿರುವುದಿಲ್ಲ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ತಾವು ಕ್ವಾರಿಯಿಂಗ್ ಪರ್ಮಿಟನ್ನು ದಿನಾಂಕ: 27-01-2010 ಮತ್ತು 08-10-2013 ರಂದು ಪಡೆದಿದ್ದು, ತದನಂತರ ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದು, ಆ ಅವಧಿಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಾವಧಾನಗಳು ಜಾರಿಗೆ ಬಂದಿರಲಿಲ್ಲ, ಆದರೆ ಸದರಿ ಅಧಿನಿಯಮವು ದಿನಾಂಕ: 25-02-2016 ರಿಂದ ಜಾರಿಗೆ ಬಂದಿರುವುದರಿಂದ ಸದರಿ ಅಧಿನಿಯಮದ ಪ್ರಾವಧಾನಗಳಲ್ಲಿ ಸದರಿ ಪ್ರಾವಧಾನಗಳು ಪೂರ್ವಾನ್ವಯವಾಗುವಂತೆ ಜಾರಿಗೆ ಬಂದಿರುತ್ತವೆ ಎಂದು ವಿಶಿಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಹೇಳದೇ ಇರುವುದರಿಂದ ಜನರಲ್ ಕ್ಲಾಸಸ್ ಆಕ್ಟ್, 1897ರ ಕಲಂ 5ರ ಪ್ರಕಾರ ಯಾವುದೇ ಅಧಿನಿಯಮವು ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ಹೇಳದೇ ಇರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಾವಧಾನಗಳು ಅಧಿಸೂಚನೆ ಸಂಖ್ಯೆ: ಗ್ರಾಅಪ/09/ಗ್ರಾಪಂಅ/2016 ದಿನಾಂಕ: 23-02-2016 ರನ್ವಯ ದಿನಾಂಕ: 25-02-2016 ರಿಂದ ಜಾರಿಗೆ ಬಂದಿರುವುದರಿಂದ ಸದರಿ ಅಧಿನಿಯಮದ ಕಲಂ 43-ಎ (v) ರ ಪ್ರಾವಧಾನದ ಅಂಶಗಳು ದಿನಾಂಕ: 08-10-2013 ರಂದು ಅಂದರೆ ಕ್ವಾರಿಯಿಂಗ್ ಪರ್ಮಿಟ್ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪಡೆದ ದಿನದಂದು ಅಥವಾ ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದ ದಿನದಂದು ಸದರಿ ಕಲಂ 43-ಎ(v) ರ ಪ್ರಾವಧಾನಗಳು ಜಾರಿಯಲ್ಲಿ ಇಲ್ಲದ ಕಾರಣ ಮಾನ್ಯ

ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್, ಮಂಗಳೂರು ಇವರು ತಮ್ಮ ಸದಸ್ಯತ್ವವನ್ನು ರದ್ದುಪಡಿಸಲು ಕಳುಹಿಸಿರುವ ಪ್ರಸ್ತಾವನೆಯು ನಿಲ್ಲತಕ್ಕದಲ್ಲ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 43–ಎ(V) ರ ಪ್ರಾವಧಾನವು ದಿನಾಂಕ: 08-10-2013 ರಂದು 20-12-2013 ರಂದು ಜಾರಿಯಲ್ಲಿ ಇಲ್ಲದೇ ಇದ್ದರೂ ಸಹ ಸದರಿ ಪ್ರಾವಧಾನದಲ್ಲಿ "ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಪತ್ರಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡು ಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅನ್ಯತಾ ಸಂಘ ಸಂಸ್ಥೆಯ ಮಂಡಳಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು ಕಂಡುಬಂದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾವು ಭಾವಿಸಿದಂತಹ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದು ಹಾಕಬಹುದು ಎಂದು ವಿವರಿಸಲಾಗಿರುತ್ತದೆ". ಈ ಪ್ರಾವಧಾನ ಪ್ರಕಾರ ತಾವಾಗಲೀ ಅಥವಾ ತಮ್ಮ ಕುಟುಂಬಕ್ಕೆ ಸಂಬಂಧಿಸಿದ ಸಂಬಂಧಿಕರಾಗಲೀ ಸರಪಾಡಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದ ಯಾವುದೇ ರೀತಿಯ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಬಂಧ ಕರಾರನ್ನು ಮಾಡಿಕೊಂಡಿರುವುದಿಲ್ಲ ಹಾಗೂ ಯಾವೊಬ್ಬ ವ್ಯಕ್ತಿಯೊಂದಿಗೂ ಸಹ ಯಾವುದೇ ವ್ಯವಹಾರದಲ್ಲಿ ಪಂಚಾಯತಿಗೆ ಸಂಬಂಧಿಸಿದಂತೆ ತೊಡಗಿರುವುದಿಲ್ಲ ಹಾಗೂ ಪಾಲುದಾರನಾಗಿರುವುದಿಲ್ಲ ಮತ್ತು ಸಂಘ ಸಂಸ್ಥೆಯ ಮಂಡಳಿಯಲ್ಲಿಯೂ ಸಹ ಪಂಚಾಯತಿಗೆ ಸಂಬಂಧಿಸಿದಂತೆ ಸದಸ್ಯನಾಗಿ ಭಾಗಿಯಾಗಿರುವುದಿಲ್ಲ.

ಆದರೆ, ತಾವು ತಮ್ಮ ವೈಯಕ್ತಿಕ ಹಿನ್ನಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನೇತ್ರಾವತಿ ನದಿ ಕಿನಾರೆಯಿಂದ ಮರಳು ತೆಗೆಯಲು ಕ್ವಾರಿಯಿಂಗ್ ಪರ್ಮಿಟ್ ಗಳನ್ನು ಪಡೆದು ಸರಪಾಡಿ ಗ್ರಾಮ ಪಂಚಾಯತ್ ನಿಂದ ಅದಕ್ಕೆ ಅನುಸಾರವಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆದು ತಾವು ವೈಯಕ್ತಿಕ ವ್ಯವಹಾರದ ವಹಿವಾಟನ್ನು ನಡೆಸಿರುವುದರಿಂದ ಸದರಿ ವೈಯಕ್ತಿಕ ವಹಿವಾಟು ಸರಪಾಡಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಕಾಮಗಾರಿ ಕೆಲಸ ಆಗದೇ ಇರುವುದರಿಂದ ಇದು ತಮ್ಮ ದುರ್ನಡತೆ ಆಗಿರುವುದಿಲ್ಲ ಮತ್ತು ಅದನ್ನು ದುರ್ನಡತೆ ಎಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್ ಇವರು ಪರಿಗಣಿಸಿ ತಮಗೆ ಪ್ರಸ್ತಾವನೆ ಸಲ್ಲಿಸಿರುವುದು ಸಹ ನ್ಯಾಯಸಮ್ಮತವಾಗಿರುವುದಿಲ್ಲ".

ದಿನಾಂಕ: 14-07-2017 ಮತ್ತು 29-07-2017ರ ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಇವರ ಪ್ರಸ್ತಾವನೆಗಳನ್ನು ರದ್ದುಪಡಿಸಬೇಕಾಗಿ ಮತ್ತು ತಮ್ಮ ಕಾರಣ ಕೇಳುವ ನೋಟೀಸ್ ದಿನಾಂಕ: 11-08-2017 ನ್ನು ಹಿಂಪಡೆಯಬೇಕಾಗಿ ಕೋರಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ದಿನಾಂಕ 11-12-2017 ರಂದು ಜರುಗಿದ ವಿಚಾರಣೆಯಲ್ಲಿ ಸಹಾಯಕ ಯೋಜನಾಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬಂಟ್ವಾಳ ತಾಲ್ಲೂಕು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸರಪಾಡಿ ಗ್ರಾಮ ಪಂಚಾಯತಿ ಹಾಗೂ ಆಪಾದಿತ ಸದಸ್ಯರು ಹಾಜರಾಗಿರುತ್ತಾರೆ ಅಧ್ಯಕ್ಷರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪ್ರಸ್ತಾವನೆಗಳು, ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಓದಲಾದ (5) ರ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)

ಅನ್ವಯ ಸದಸ್ಯನು ಪ್ರಸ್ತುತ ಅವಧಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಸಗಿದ ದುರ್ನಡತೆಗೆ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ಶ್ರೀ ಧನಂಜಯ ಶೆಟ್ಟಿ ರವರ ವಿರುದ್ಧ ಇರುವ ಆರೋಪವು ಹಿಂದಿನ ಗ್ರಾಮ ಪಂಚಾಯತಿಯ ಸದಸ್ಯತ್ವದ ಅವಧಿಗೆ ಸಂಬಂಧಿಸಿದ್ದಾಗಿರುವುದರಿಂದ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಶ್ರೀ ಧನಂಜಯ ಶೆಟ್ಟಿ ರವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಡಲು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 892 ಗ್ರಾಪಂಅ 2017**

**ಬೆಂಗಳೂರು, ದಿನಾಂಕ:13-03-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರ ಲಿಖಿತ ಹೇಳಿಕೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

14/3

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
3. ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
5. ಗಣಕ ಶಾಖೆ/ಕರ್ನಾಟಕ ವಿಕಾಸ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.